ಗಳ ಸ್ತಂಭವಾಶ್ರಯಿಸಿ ಕುಳಿತನು. ವಸುದೇವನು ಮದನವೇಗೆಯೊಂದಿಗೆ ಆ ವಿದ್ಯಾಧರ ನಿಕಾಯದ ಪರಿಚಯವನ್ನು ಕೇಳಿದನು. ಅವಳು ಹೀಗೆ ನಿರೂಪಿಸಿದಳು :

"ಸ್ವಾಮಿ, ಪದ್ಮಪಾಣಗಳೂ ಪದ್ಮಮಾಲಾಧರರೂ ಆಗಿ ನಮ್ಮ ಸ್ತಂಭವನ್ನಾಶ್ರಯಿಸಿ ಕುಳಿತ ಇವರು ಗೌರಿಕ ವಿದ್ಯಾಧರರು ; ರಕ್ತಮಾಲಾಧರರೂ ರಕ್ತಕಂಬಲ ವಸ್ತ್ರರೂ ಆಗಿ ಗಾಂಧಾರಸ್ತಂಭವನ್ನು ನೆಮ್ಮಿ ಕುಳಿತ ಇವರು ಗಾಂಧಾರ ಖೇಚರರು ; ನಾನಾ ವರ್ಣಮಯ ಸ್ವರ್ಣಪೀತ ಕೌಶೇಯವಸ್ತ್ರರಾಗಿ ಮಾನವಸ್ತಂಭವನ್ನು ನೆಮ್ಮಿ ಕುಳಿತ ಇವರು ಮಾನವಪುತ್ರಕರು ; ಕಿಂಚಿದಾರಕ್ತ ವಸ್ತ್ರರೂ ಮಣಿಭೂಷಣರೂ ಆಗಿ ಮಾನಸ್ತಂಭವನ್ನು ನೆಮ್ಮಿ ಕುಳಿತ ಇವರು ಮನುಪುತ್ರಕರು ; ವಿಚಿತ್ರೌಷಧಿಹಸ್ತರೂ ವಿಚಿತ್ರಾಭರಣಸ್ರಜರೂ ಆಗಿ ಓಷಧಿಸ್ತಂಭವನ್ನು ನೆಮ್ಮಿ ಕುಳಿತ ಇವರು ಮೂಲವೀರ್ಯರು; ಸರ್ವರ್ತುಕುಸುಮಾಮೋದ ಕಾಂಚನಾಭರಣಸ್ರಜರಾಗಿ ಭೂಮಿಮಂಡಕ ಸ್ತಂಭದ ಬಳಿ ಕುಳಿತ ಇವರು ಅಂತರ್ಭೂಮಿಚರ ವಿದ್ಯಾಧರರು ; ವಿಚಿತ್ರ ಕುಂಡಲಧರರೂ ನಾಗಾಂಗದ ಭೂಷಣರೂ ಆಗಿ ಶಂಕುಸ್ತಂಭದ ಬಳಿ ಕುಳಿತ ಇವರು ಶಂಕುಕರು ; ಆಬದ್ಧಮಕುಟಾಪೀಡರೂ ಮಣಿಕುಂಡಲರೂ ಆಗಿ ಕೌಶಿಕಸ್ತಂಭವನ್ನು ನೆಮ್ಮಿ ಕುಳಿತ ಇವರು ಕೌಶಿಕರು. ಸ್ವಾಮಿ, ಸಂಗ್ರಹವಾಗಿ ಆರ್ಯವಿದ್ಯಾಧರರ ವಿಚಾರ ಹೇಳಿದ್ದೇನೆ; ಈಗ ಮಾತಂಗ ನಿಕಾಯದ ಖೇಚರರ ಪರಿಚಯ ಕೇಳು :

ನೀಲಾಂಬುದಚಯಶ್ಯಾಮರೂ ನೀಲಾಂಬರವರಸ್ರಜರೂ ಆಗಿ ಮಾತಂಗ ಸ್ತಂಭದ ಸಮೀಪದಲ್ಲಿ ಕುಳಿತ ಇವರು ಮಾತಂಗ ವಿದ್ಯಾಧರರು ; ಶ್ಮಶಾನಾಸ್ಥಿ ಕೃತೋತ್ತಂಸರೂ ಭಸ್ಮರೇಣುವಿಧೂಸರರೂ ಆಗಿ ಶ್ಮಶಾನಸ್ತಂಭವನ್ನಾಶ್ರಯಿಸಿ ಕುಳಿತ ಇವರು ಶ್ಮಶಾನನಿಲಯರು; ನೀಲವೈಡೂರ್ಯಮಣಿವರ್ಣವಸ್ತ್ರಧರರಾಗಿ ಪಾಂಡುರಸ್ತಂಭವನ್ನು ನೆಮ್ಮಿ ಕುಳಿತ ಇವರು ಪಾಂಡುಕರು ; ಕೃಷ್ಣಾಜಿನಧರರೂ ಕೃಷ್ಣಚರ್ಮಾಂಬರಸ್ರಜರೂ ಆಗಿ ಕಾಲಸ್ತಂಭವನ್ನು ನೆಮ್ಮಿ ಕುಳಿತ ಇವರು ಕಾಲಶ್ವಪಾಕಿಗಳು ; ಪಿಂಗಲಕೇಶಿಗಳೂ ತಪ್ತಕಾಂಚನಭೂಷರೂ ಆತ ಶ್ವಪಾಕಿ ವಿದ್ಯೆಗಳ ಸ್ತಂಭವನ್ನು ನೆಮ್ಮಿ ಕುಳಿತ ಇವರು ಶ್ವಪಾಕಿಗಳು ; ಪತ್ರಿಪರ್ಣಾಂಶುಕಚ್ಛನ್ನರೂ ವಿಚಿತ್ರಮಕುಟಸ್ರಜರೂ ಆಗಿ ಪಾರ್ವತ ಸ್ತಂಭದ ಬಳಿ ಕುಳಿತ ಇವರು ಪಾರ್ವತೇಯರು ; ವಂಶೀಪತ್ರಕೃತೋತ್ತಂಸರೂ ಸರ್ವರ್ತು ಕುಸುಮಸ್ರಜರೂ ಆಗಿ ವಂಶಸ್ತಂಭವನ್ನು ಆಶ್ರಯಿಸಿ ಕುಳಿತ ಇವರು ವಂಶಾಲಯರು ; ಮಹಾಭುಜಗ ಸಂದಷ್ಟಭೂಷಣರಾಗಿ ವೃಕ್ಷಮೂಲ ಮಹಾಸ್ತಂಭವನ್ನಾಶ್ರಯಿಸಿದ ಇವರು ವಾರ್ಕ್ಷಮೂಲಿಕರು.

ಹೀಗೆ ಸ್ವವೇಷ ಕೃತಸಂಚಾರರೂ ಸ್ವಚಿಹ್ನಕೃತಭೂಷಣರೂ ಆದ ಈಯೆಲ್ಲ ವಿದ್ಯಾಧರನಿಕಾಯಗಳ ಸಂಕ್ಷೇಪವರ್ಣನೆಯನ್ನು ಮಾಡಿದ್ದೇನೆ."

ಹೀಗೆ ಮದನವೇಗೆ ನಿರೂಪಿಸಲು, ವಿದ್ಯಾಧರಾಂತರವನ್ನು ತಿಳಿದು ವಸುದೇವನು ಸ್ವಸ್ಥಾನಕ್ಕೆ ಹೋದನು. ಖೇಚರರೂ ತೆರಳಿದರು.

ಒಂದು ದಿನ ವಸುದೇವನು ಯಾವುದೋ ಕಾರಣಕ್ಕೆ ಮದನವೇಗೆಯನ್ನು "ಬಾ



ವೇಗವತಿ" ಎಂದುಬಿಟ್ಟನು. ಇದರಿಂದ ಅವಳಿಗೆ ಕೋಪಬಂದು ಅವಳು ಮನೆಯೊಳಕ್ಕೆ ಹೊರಟುಹೋದಳು. ಅದೇ ಹೊತ್ತಿಗೆ ತ್ರಿಶಿಖರನ ವಿಧವೆಯಾದ ಪತ್ನಿ ಸೂರ್ಪಣಖಿ ಮದನವೇಗೆಯ ರೂಪಿನಲ್ಲಿ ಬಂದು ಮೋಸದಿಂದ ವಸುದೇವನನ್ನು ಅಪಹರಿಸಿ ಒಯ್ದಳು. ಆಕಾಶಕ್ಕೆ ಒಯ್ದು ಅಲ್ಲಿಂದ ಅವನನ್ನು ಕೆಳಕ್ಕೆ ಬಿಟ್ಟುಬಿಡಬೇಕೆಂದು ಅವಳ ಹಂಚಿಕೆಯಾಗಿತ್ತು. ಅಷ್ಟರಲ್ಲಿ ಅಕಸ್ಮಾತ್ತಾಗಿ ಆಕಾಶದಲ್ಲಿಯೇ ಕೆಳಗಡೆ ವಸುದೇವನ ವೈರಿ ಮಾನಸವೇಗನನ್ನು ನೋಡಿದಳು. ಆಕಾಶದಿಂದ ಕೆಳಕ್ಕೆ ಹಾಕಿ ವಸುದೇವನನ್ನು ಕೊಂದು ಬಿಡಲು ಮಾನಸವೇಗನನ್ನು ನಿಯೋಜಿಸಿ ಸೂರ್ಪಣಖಿ ಇಷ್ಟಬಂದೆಡೆಗೆ ಹೊರಟು ಹೋದಳು.ವಸುದೇವನು ಕೆಳಗೆ ತೃಣಕೂಟಕದಮೇಲೆ ಬಿದ್ದನು.ಅಲ್ಲಿ ಮನುಷ್ಯಸಂಕೀರ್ತಿತವಾದ ಜರಾಸಂಧನ ಧವಲಖ್ಯಾತಿಯನ್ನು ಕೇಳಿ ಅದು ರಾಜಗೃಹನಗರವೆಂದು ತಿಳಿದು ಹರ್ಷಿಸಿ ಅದನ್ನು ಪ್ರವೇಶಿಸಿದನು. ರಾಜಗೃಹದಲ್ಲಿ ವಸುದೇವನು ದ್ಯೂತದಲ್ಲಿ ಕೋಟಿ ಹೊನ್ನನ್ನು ಗೆದ್ದು ತ್ಯಾಗಶೀಲನಾಗಿ ಆಯೆಲ್ಲವನ್ನೂ ಅಲ್ಲಿಲ್ಲಿ ಜನರಿಗೆ ಹಂಚಿಬಿಟ್ಟನು. "ಯಾವಾತ ದ್ಯೂತದಲ್ಲಿ ಕೋಟಿ ಹೊನ್ನನ್ನು ಗೆದ್ದು ಹಂಚಿಬಿಡುತ್ತಾನೋ ಆತನೇ ನಿನ್ನನ್ನು ಕೊಲ್ಲುವಾತನ ತಂದೆಯಾಗುವನು" ಎಂದು ನೈಮಿತ್ತಿಕರು ಜರಾಸಂಧನಿಗೆ ಹೇಳಿದ್ದರು. ಅವರ ಆದೇಶಾನುಸಾರವಾಗಿ ಅಲ್ಲಿ ಆ ಸಮಯದಲ್ಲಿ ಅಂಥ ವ್ಯಕ್ತಿಗಾಗಿ ಹುಡುಕಾಟ ನಡೆದಿತ್ತು. ಜರಾಸಂಧನ ಅಧಿಕಾರಿಗಳು ವಸುದೇವನನ್ನು ಕಂಡು, ಹಿಡಿದು ಕೊಂಡು, "ತಕ್ಷಣವೇ ಸಾಯಲಿ" ಎಂದು ಅವನನ್ನು ತೊಗಲ ಚೀಲದಲ್ಲಿ ಕಟ್ಟಿ ಪರ್ವತಾಗ್ರದಿಂದ ಕೆಳಕ್ಕೆ ಹಾಕಿಬಿಟ್ಟರು. ವಸುದೇವನು ಕೆಳಕ್ಕೆ ಬೀಳುತ್ತಿರುವಾಗ ಆಕಸ್ಮಿಕವಾಗಿ ವೇಗವತಿ ಸರ್ರನೆ ಬಂದು ಅವನನ್ನು ಬಲವಾಗಿ ಹಿಡಿದುಕೊಂಡಳು. ಹಾಗೆ ಹಿಡಿದು ಕೊಂಡು ಎತ್ತಲೋ ಒಯ್ಯುವಾಗ ವಸುದೇವನು ತನ್ನಲ್ಲಿಯೇ ಹೀಗೆಂದುಕೊಂಡನು: "ಹಿಂದೆ ಭೇರುಂಡವು ಹೇಗೆ ಚಾರುದತ್ತನನ್ನು ಕೊಂಡೊಯ್ದಿತೋ ಹಾಗೆಯೇ ಅದು ಈಗ ನನ್ನನ್ನು ಒಯ್ಯುತ್ತಿರಬೇಕು; ಇನ್ನೇನು ದುಃಖ ಕಾದಿದೆಯೋ ? ಬಂಧುಸಂಬಂಧ, ಭೋಗಸಂಪದ, ದಿವ್ಯಶರೀರ--ಇವೆಲ್ಲ ದುಃಖದಾಯಕಗಳು. ಆದರೆ ಮೂರ್ಖಜನ ಸುಖಪ್ರದವೆಂದು ತಿಳಿಯುತ್ತಾರೆ. ಪಾಪಪುಣ್ಯ ಸುಖದುಃಖ ಜನನಮರಣ ಇವನ್ನು ಜೀವ ಒಂಟಿಯಾಗಿಯೇ ಅನುಭವಿಸಬೇಕು. ಹೀಗಿದ್ದರೂ ಬೇಕಾದ ಸ್ವಜನರನ್ನು ಕಟ್ಟಿಕೊಳ್ಳುತ್ತಾರೆ. ಭೋಗಸಂಬಂಧವನ್ನು ಬಿಟ್ಟು ಮೋಕ್ಷಮಾರ್ಗಸ್ಥಿರರಾದವರೇ ಸುಖಿಗಳು, ಧೀರರು. ನನ್ನ ಕರ್ಮವಾದರೋ ಭಾರವಾದ್ದು. ಆದ್ದರಿಂದಲೇ ಈ ಭೋಗತೃಷ್ಣೆಯ ಅಲೆಗಳಲ್ಲಿ ಮುಳುಗಿ ತೇಲುತ್ತಿದ್ದೇನೆ. ಸಂಸಾರದಲ್ಲಿ ಅಲೆಯುತ್ತಿದ್ದೇನೆ."

ಹೀಗೆ ಚಿಂತಿಸುತ್ತಲಿದ್ದ ವಸುದೇವನನ್ನು ವೇಗವತಿ ಗಿರಿತಟದಲ್ಲಿಳಿಸಿ ತೊಗಲ ಚೀಲದಿಂದ ಅವನನ್ನು ಹೊರಕ್ಕೆಳೆದುಕೊಂಡಳು. ಪತಿಯನ್ನು ನೋಡಿ ವಿರಹಾಕುಲಿತೆಯಾಗಿ ರೋದಿಸಿದಳು. ವಸುದೇವನು ಅವಳನ್ನು ಅಪ್ಪಿ ಸಂತೋಷಿಸಿದನು. ಆಮೇಲೆ ವಸುದೇವನು ಪ್ರಶ್ನಿಸಲಾಗಿ ಪತಿಯ ಅಪಹರಣವಾದ ಮೇಲೆ ನಡೆದ ಸುಖದುಃಖವನ್ನೆಲ್ಲ ಅವನಿಗೆ ಹೇಳಿಕೊಂಡಳು : "ನಾನು ನಿನಗಾಗಿ ವಿಜಯಾರ್ಧದ ಉಭಯಶ್ರೇಣಿಗಳಲ್ಲೂ